**ತಾ:23.09.2024 ರಂದು ಸಾಕ್ಷಿಯನ್ನು ಪುನಃ ಕರೆದು ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ ಆರೋಪಿಪರ ಶ್ರೀ.ಎಮ್ ಎಸ್ ವಕೀಲರಿಂದಃ**

4. ನನಗೆ ಸರ್ವೆ ನಂಬರ್ 171 ಕ್ಕೆ ಸಂಬಂಧಪಟ್ಟ ಘಟನೆಯ ಬಗ್ಗೆ ನನಗೆ ಏನು ಗೊತ್ತಿಲ್ಲ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪಂಚನಾಮೆಯನ್ನು ನನ್ನ ಸಮಕ್ಷಮ ಮಾಡಿಲ್ಲ ಎಂದರೆ ಸರಿ. ಸರ್ವೆ ನಂಬರ್ 171 ಕ್ಕೆ ಸಂಬಂಧಿಸಿದಂತೆ ಹೊಸಕೋಟೆ ನ್ಯಾಯಾಲಯದಲ್ಲಿ ದಾವೆ ಇತ್ತು ಎಂದರೆ ಸರಿ. ಸದರಿ ದಾವೆಯಲ್ಲಿ ಎಲ್ಲಾ ವಿವಾದಗಳು ಬಗೆಹರಿದಿದೆ ಎಂದರೆ ಸರಿ. ಸದರಿ ಸಿವಿಲ್ ದಾವೆಯಲ್ಲಿ ದಾರಿಯ ವಿವಾದ, ರಸ್ತೆಯ ವಿವಾದ ಮತ್ತು ಕಂಪೌಂಡ್ ವಿವಾದ ಬಗೆಹರಿದಿದೆ ಎಂದರೆ ಸರಿ. ಸದರಿ ಸಿವಿಲ್ ದಾವೆಯಲ್ಲಿ ಪಿರ್ಯಾದಿದಾರರು ಆರೋಪಿತರೊಂದಿಗೆ ಜಗಳ ಮಾಡಬಾರದು ಮತ್ತು ಆರೋಪಿತರು ಪಿರ್ಯಾದಿದಾರರೊಂದಿಗೆ ಜಗಳ ಮಾಡಬಾರದು ಎಂದು ತೀರ್ಮಾನ ಆಗಿರುತ್ತದೆ ಎಂದರೆ ಸರಿ. ನಾನು ಈ ಹಿಂದೆ ಸಾಕ್ಷಿ ನುಡಿದ ನಂತರ ಹೊಸಕೋಟೆ ನ್ಯಾಯಾಲಯದಲ್ಲಿ ರಾಜಿಯಾಗಿರುವುದು ಎಂದರೆ ಸರಿ. ಪೊಲೀಸರು ನನ್ನ ಹೇಳಿಕೆಯನ್ನು ತೆಗೆದುಕೊಳ್ಳಲಿಲ್ಲ ಎಂದರೆ ಸರಿ. ಆದ್ದರಿಂದ ನನಗೆ ಈ ಘಟನೆಯ ಬಗ್ಗೆ ಗೊತ್ತಿಲ್ಲ ಎಂದರೆ ಸರಿ.

**ಮರುವಿಚಾರಣೆ ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.**

<u>ಮರು ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ:</u>

5. ಈ ಹಿಂದೆ ನಾನು ಸಾಕ್ಷಿ ನುಡಿಯಲು ನನಗೆ ಯಾರು ಒತ್ತಾಯ ಮಾಡಿರುವುದಿಲ್ಲ. ಈ ಹಿಂದೆ ನಡೆದ ಘಟನೆಯನ್ನು ನಾನು ನನ್ನ ಹಿಂದಿನ ಸಾಕ್ಷಿಯಲ್ಲಿ ಸ್ವಖುಷಿಯಿಂದ ಹೇಳಿರುತ್ತೇನೆ. ನನಗೆ ವ್ಯವಹಾರಿಕ ಜ್ಞಾನ ಇರುತ್ತದೆ. ನಾನು ಈ ಹಿಂದೆ ನೀಡಿದ ಸಾಕ್ಷಿ ಸರಿಯಾಗಿದ್ದು ಪಾಟೀ ಸವಾಲಿನಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳಬಾರದು ಎಂಬ ಅರಿವು ನನಗೆ ಇದೆ ಎಂದರೆ ಸರಿ. ಒಂದು ವೇಳೆ ಸುಳ್ಳು ಸಾಕ್ಷಿ ಹೇಳಿದರೆ ಶಿಕ್ಷೆ ಆಗುತ್ತದೆ ಎಂದರೆ ಸರಿ. ನಾನು ಈ ಹಿಂದೆ ಹೇಳಿದ ಸಾಕ್ಷಿ ಸರಿಯಾಗಿದ್ದು ಆರೋಪಿತರಿಗೆ ಹೆದರಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ:ಇಲ್ಲ.</u>

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಶಿಲ್ಪಾ ಕೆ.ಎಸ್.,)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.